ನಿಪ್ಪಾಣಿಯಲ್ಲಿ ಬೀಡಿ ಕಾರ್ಮಿಕರಿಗಾಗಿ ಮನೆಗಳನ್ನು ಕಟ್ಟಲು ಜಮೀನು ಸ್ವಾಧೀನಪಡಿಸಿಕೊಂಡಿರುವುದು

೭೦೫. ಶ್ರೀ ಸ:ಭಾಷ್ ಜೋಶಿ (ನಿಪ್ಪಾಣಿ) —ಮಾನ್ಯ ಕಂದಾಯ ಮತ್ತು ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

(ಅ) ನಿಪ್ಪಾಣಿಯಲ್ಲಿ ಬೀಡಿ ಕಾರ್ಮಿಕರಿಗಾಗಿ ಮನೆಗಳನ್ನು ಕಟ್ಟಲು ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆಯೇ ?

(ಆ) ಹಾಗಿದ್ದಲ್ಲಿ ಮನೆಗಳ ನಿರ್ಮಾಣ ಕಾರ್ಯವನ್ನು ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಕೆ. ಹೆಚ್. ಪಾಟೀಲ್ (ಕಂದಾಯ ಮತ್ತು ಕಾರ್ಮಿಕ ಸಚಿವರು).—

(ಅ) ನಿಪ್ಪಾಣಿ ತಾಲ್ಲೂಕಿನ ಯಮಗಾರಣಿ ಗ್ರಾಮ ಸರ್ವೆ ನಂ. ೧೪೩ರಲ್ಲಿ ೩ ಎಕರೆ ೨೯ ಗುಂಟೆ ಸರ್ಕಾರಿ ಭೂಮಿಯನ್ನು ಬೆಳಗಾಂ ಜಿಲ್ಲೆಯ ವಿಶೇಷ ಜಿಲ್ಲಾಧಿಕಾರಿಗಳು ಹಂಚಿಕೆ ಮಾಡಿರುತ್ತಾರೆ, ಸದರಿ ಜಮೀನನ್ನು ದಿನಾಂಕ ೨-೨-೧೯೬೮ರಂದು ಕರ್ನಾಟಕ ಗೃಹ ಮಂಡಳಿಯವರು ಸ್ವಾಧೀನಕ್ಕೆ ತೆಗೆದುಕೊಂಡಿರುತ್ತಾರೆ.

(ಆ) ನವೆಂಬರ್-ಡಿಸೆಂಬರ್ ೧೯೭೦ರಲ್ಲಿ ಪ್ರಾರಂಭ ಮಾಡಲಾಗುವುದು.

ಹುಲ್ಲುಗಾವಲು ಭೂಮಿಯನ್ನು ಆಕ್ರಮ ಸಾಗುವಳಿ ಮಾಡಿರುವ ಬಗ್ಗೆ

೯೪೯. ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ)—ಮಾನ್ಯ ಕಂದಾಯ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

(ಅ) ಗುಲ್ಬರ್ಗಾ ಜಿಲ್ಲೆ, ಸೇಡಂ ತಾಲ್ಲೂಕಿನ ಹುಲ್ಲುಗಾವಲು (ಗಾಯರಾಣ್ಣ) ಭೂಮಿಯನ್ನು ಸಾಗುವಳಿ ಮಾಡಿದ್ದ, ಸರ್ಕಾರದವರ ಗಮನಕ್ಕೆ ಬಂದಿದೆಯೇ ?

(ಆ) ಸಾಗುವಳಿ ಮಾಡಿದ್ದರೆ, ಎಷ್ಟು ಎಕರೆ ಭೂಮಿ ಸಾಗುವಳಿ ಆಗಿದೆ ? ಇದರಲ್ಲಿ ಇಲ್ಲಿಯವರೆಗೆ ಸಕ್ರಮಗೊಳಿಸಿದ್ದು ಎಷ್ಟು ?

ಶ್ರೀ ಕೆ. ಹೆಚ್. ಪಾಟೀಲ್ (ಕಂದಾಯ ಹಾಗೂ ಕಾರ್ಮಿಕ ಮಂತ್ರಿಗಳು).—

(ಅ) ಹೌದು

(ಆ) ೭೬೬.೩೬ ಎಕರೆ ಜಮೀನು ಸಾಗುವಳಿ ಆಗಿದೆ. ಇದನ್ನು ಇದುವರೆವಿಗೆ ಸಕ್ರಮಗೊಳಿಸಿರುವುದಿಲ್ಲ.

ಚುಕ್ಕೆ ಗುರುತ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೋತ್ತರ

ರಾಜ್ಯದಲ್ಲಿ ನಗರ ಭೂಮಿತಿ ಕಾಯಿದೆ ಬಗ್ಗೆ

೫೬೩. ಶ್ರೀ ಸಿ. ಬೈರೇಗೌಡ (ವೇಮಗಲ್).— ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸಂವರೆ

(ಅ) ಕರ್ನಾಟಕ ರಾಜ್ಯದಲ್ಲಿ ನಗರ ಭೂಮಿತಿ ಕಾಯಿದೆ ಯಾವ ತಾರೀಖಿನಿಂದ ಜಾರಿಗೆ ಬಂದಿದೆ

(ಆ) ಈ ಕಾನೂನು ನಗರ ಪ್ರದೇಶದಲ್ಲಿರುವ ವ್ಯವಸಾಯ ಮತ್ತು ವ್ಯವಸಾಯೇತ ಭೂಮಿಗೂ ಅನ್ವಯವಾಗುತ್ತದೆಯೇ.

(ಇ) ೧೯೬೭ರಿಂದ ೧೯೭೦ರವರೆವಿಗೂ ಪ್ರತಿ ವರ್ಷ ಎಷ್ಟು ಬಗೆಯ ಎಷ್ಟು ಜಮೀನಿಗೆ ವಿನಾಯ್ತಿ ನೀಡಲಾಗಿದೆ ಮತ್ತು ಬೆಂಗಳೂರಿನಲ್ಲಿ ಮೇಲ್ಕಂಡ ಅವಧಿಯಲ್ಲಿ ಪ್ರತಿ ವಿನಾಯ್ತಿ ನೀಡಲಾಗಿದೆ.

(ಈ) ಈ ಭೂಮಿ ಮಿತಿ ನೀಡುವಾಗ ಅಕ್ರಮಗಳೇನಾದರೂ ನಡೆದಿದೆಯೇ ? ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರವು ತೆಗೆದುಕೊಂಡ ಕ್ರಮಗಳೇನು ?